738

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : M/s JSW Renew Energy Limited ರ ವರಿಗೆ ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್‌ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ** : 1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/JSWREL-3 MW/(SSEPL)/Jagalur/Davanagere/F-2010/2021/623, ದಿನಾಂಕ:04.02.2021

2) ಸರ್ಕಾರದ ದಿನಾಂಕ:10.02.2021 ರ ಹಂಚಿಕೆ ಸಮಿತಿ ಸಭೆ.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s JSW Renew Energy Limited ರವರು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಮಾರೇನಹಳ್ಳಿ ಮತ್ತು ಉದ್ದುಘಟ್ಟ ಗ್ರಾಮಗಳಲ್ಲಿ 3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಘಟಕಕ್ಕೆ ಹಂಚಿಕೆ ನೀಡುವಂತೆ ಕೋರಿರುವ ಪ್ರಸ್ತಾವನೆಯನ್ನು ಹಂಚಿಕೆ ಸಮಿತಿ ಸಭೆಯಲ್ಲಿ ಮಂಡಿಸಲು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2)ರ ಹಂಚಿಕೆ ಸಮಿತಿ ಸಭೆಯಲ್ಲಿ M/s JSW Renew Energy Limited ರವರು ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನ ಮಾರೇನಹಳ್ಳಿ ಮತ್ತು ಉದ್ದುಘಟ್ಟ ಗ್ರಾಮಗಳಲ್ಲಿ ISTS ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹಂಚಿಕೆ ನೀಡುವ ಪ್ರಸ್ತಾವನೆಯನ್ನು ಸಮಿತಿಯು ಪರಿಶೀಲಿಸಿ, ಸದರಿ ಸ್ಥಳವು ಈಗಾಗಲೇ M/s Sreesannidhi Energy Private Limited ರವರಿಗೆ ದಿನಾಂಕ:05.11.2019ರಂದು ನಡೆದ ಹಂಚಿಕೆ ಸಮಿತಿ ಸಭೆಯಲ್ಲಿ ತಾತ್ವಿಕ ಅನುಮೋದನೆ ನೀಡಲು ಶಿಫಾರಸ್ಸುಗೊಂಡಿರುತ್ತದೆ. ಆದರೆ, ಸದರಿ ಕಂಪನಿಯವರು, ತಾತ್ವಿಕ ಅನುಮೋದನೆಗೆ ಶಿಫಾರಸ್ಸುಗೊಂಡಿರುವ ಪ್ರಸ್ತಾವನೆಯನ್ನು ಕಾರಣಾಂತರಗಳಿಂದ ಹಿಂಪಡೆಯುತ್ತಿರುವುದಾಗಿ ತಿಳಿಸಿದ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಯ ಶಿಫಾರಸ್ಸನ್ನು ಹಿಂಪಡೆಯಲು ಮತ್ತು ಕಡತವನ್ನು ಹಿಂದಿರುಗಿಸಲು ಸರ್ಕಾರಕ್ಕೆ ಕೋರಲಾಗಿ, ಸರ್ಕಾರದಿಂದ ದಿನಾಂಕ:22.04.2021ರ ಪತ್ರದನ್ವಯ ಸದರಿ 3 ಮೆ.ವ್ಯಾ ಸಾಮರ್ಥ್ಯದ ತಾತ್ವಿಕ ಅನುಮೋದನೆ ಪ್ರಸ್ತಾವನೆಯನ್ನು ವಾಪಸ್ಸು ಮಾಡಲಾಗಿರುವ ಸ್ಥಳದ ಮೇಲೆ ಬರುತ್ತದೆ. ಆದುದರಿಂದ, ಸದರಿ ಸ್ಥಳವು ಹಂಚಿಕೆಗೆ ಲಭ್ಯವಿರುತ್ತದೆ.

M/s JSW Renew Energy Limited ರವರು ಯೋಜನಾ ಸ್ಥಳದ ಮತ್ತು ಅಳವಡಿಸುವ ವಿಂಡ್ ಟರ್ಬೈನ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿರುತ್ತಾರೆ. ಸದರಿಯವರು 500 ಕಿ.ವ್ಯಾ.ನ 6 ವಿಂಡ್ ಟರ್ಬೈನ್‌ಗಳನ್ನು ಅಳವಡಿಸುತ್ತಿದ್ದು, ಸದರಿಯವರು ಅಳವಡಿಸುವ ಪ್ರತಿ ವಿಂಡ್ ಟರ್ಬೈನ್‌ನ footprint ಜಾಗಕ್ಕೆ 4 ಎಕರೆಗಳಂತೆ ಒಟ್ಟು 32 ಎಕರೆ ಜಮೀನನ್ನು ನೀಡಬಹುದಾಗಿರುತ್ತದೆ. ಆದಕಾರಣ ಯೋಜನೆಗೆ ಅಭಿವೃದ್ಧಿದಾರರು ಸಲ್ಲಿಸಿರುವ ಯೋಜನಾ ವಿಸ್ತೀರ್ಣದಲ್ಲಿ 32 ಎಕರೆ ಜಮೀನನ್ನು ಪರಿಗಣಿಸಿ ISTS ವರ್ಗದಡಿಯಲ್ಲಿ ಹಂಚಿಕೆ ಮಾಡಬಹುದಾಗಿದೆ. ಯೋಜನೆಗೆ ಬೇಕಾಗುವ ಜಮೀನನ್ನು ಪಡೆಯುವುದು ಮತ್ತು PGCIL ನಿಂದ Evacuation ನಿರಾಕ್ಷೇಪಣಾ ಪತ್ರ ಮತ್ತು LTA approval ಪಡೆಯುವುದು ಅಭಿವೃದ್ಧಿದಾರರ ಜವಾಬ್ದಾರಿಯಾಗಿರುತ್ತದೆ. ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ ನ್ನು ಕೇಂದ್ರ ಸರ್ಕಾರದ Power Grid Corporation of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್ / ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಷರತ್ತಿಗೊಳಪಟ್ಟು M/s JSW Renew Energy Limited ರವರಿಗೆ 3 ಮೆ.ವ್ಯಾ ಸಾಮರ್ಥ್ಯದ ಪವನ

ವಿದ್ಯುತ್ ಯೋಜನೆಯನ್ನು ISTS ವರ್ಗದಡಿಯಲ್ಲಿ ಹಂಚಿಕೆಗೆ ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

**Geographical area description for 3MW capacity wind power project of M/s JSW Renew Energy Limited**

| Sl. No | Toposheet No. | Proposed Capacity in MW | Nearby villages of the proposed area, and district | Geographical area description of the project |
|---|---|---|---|---|
| 1 | 57 B/6 | 03 MW (6 Nos x 500kW) | Marenahalli and Uddughatta villages of Jagalur Taluk, Davanagere district. | The proposed area consists of 2 parts i.e., Part-A and Part-B.<br>**Part A: 1.5 MW**<br>The Proposed area is surrounded by the points A-B-C-D-A and are held in the following Geographical co-ordinates as:<br>Point A:Lat:14°30'0"N, Long:76°19'36.62"E<br>Point B:Lat:14°30'45.1"N,Long:76°19'47.67"E<br>Point C:Lat:14°30'45.82"N,Long: 76°20'16.22"E<br>Point D:Lat: 14°30'00"N,Long:76°20'32"E<br>**Part-B:1.5 MW**<br>The Proposed area is surrounded by the points A-B-C-D-A and are held in the following Geographical co-ordinates as:<br>Point A:Lat:14°30'0"N, Long:76°22'7.03"E<br>Point B:Lat:14°31'14.62"N,Long:76°21'34.34"E<br>Point C:Lat:14°31'16.82"N,Long:76°21'57.78"E<br>Point D:Lat: 14°30'00"N,Long: 76°22'57.82"E |
| | Total | 03 MW | | |

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 83 ಎನ್‌ಸಿಇ 2021</u>**
**<u>ಬೆಂಗಳೂರು, ದಿನಾಂಕ :15/07/2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s JSW Renew Energy Limited ರವರಿಗೆ ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನ ಮಾರೇನಹಳ್ಳಿ ಮತ್ತು ಉದ್ದುಘಟ್ಟ ಗ್ರಾಮಗಳಲ್ಲಿ 3 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

....3